ದಿನಾಂಕ **15-09-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ **AP** ವಕೀಲರಿಂದ

ಈ ದಾವೆಯನ್ನು ನಾನು ಮತ್ತು ನನ್ನ ತಾಯಿ ಪ್ರತಿವಾದಿಗಳ ವಿರುದ್ದ 5 ಜಮೀನುಗಳ ಕುರಿತು ಮಾಡಿರುತ್ತೇವೆ. ದಾವ ಜಮೀನುಗಳ ಸ.ನಂ. ಮತ್ತು ಕ್ಷೇತ್ರ ಹೇಳಲು ನನಗೆ ಗೊತ್ತಾಗುವುದಿಲ್ಲ. ನನ್ನ ತಾಯಿಗೆ ನಾವು ಇಬ್ಬರು ಮಕ್ಕಳು ಇರುತ್ತೇವೆ. ನನಗೆ ಬಸ್ಸಮ್ಮ ಎಂಬ ಸಹೋದರಿ ಇರುತ್ತಾಳೆ. ನನ್ನ ಸಹೋದರಿ ಬಸ್ಸಮ್ಮಳನ್ನು ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ನನ್ನ ತಂದೆಯ ತಂದೆಗೆ ಸೇರಿದ ಆಸ್ತಿಗಳು ಆಗಿರುತ್ತವೆ. ನನ್ನ ತಾತನ ಹೆಸರು ಅಮರಪ್ಪ ಇರುತ್ತದೆ. ನನ್ನ

ಅಜ್ಜಿ ಹೆಸರು ಶಿವಮ್ಮ ಇರುತ್ತದೆ ಸದರಿಯವರು ಇಬ್ಬರು ಮೃತಪಟ್ಟಿರುತ್ತಾರೆ. ನನ್ನ ತಾತ ಅಮರಪ್ಪನಿಗೆ 4 ಜನ ಗಂಡು ಮಕ್ಕಳು 3 ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳು ಎಂದರೆ ಶಿವರಾಯ, ದುರ್ಗಪ್ಪ, ಮಲ್ಲಪ್ಪ ಮತ್ತು ಗಂಗಣ್ಣ ಉರ್ಫ ಗಂಗಾಧರ ಇರುತ್ತಾರೆ. ಇವರಲ್ಲಿ ನನ್ನ ತಂದೆ ದುರ್ಗಪ್ಪ ಮತ್ತು ಶಿವರಾಯ ಮೃತಪಟ್ಟಿರುತ್ತಾರೆ. 3 ಹೆಣ್ಣು ಮಕ್ಕಳ ಹೆಸರು ಲಿಂಗಮ್ಮ, ಶಿವಮಲ್ಲಮ್ಮ ಮತ್ತು ಯಲ್ಲಮ್ಮ ಎಂದು ಇರುತ್ತಾರೆ. ಸದರಿಯವರಲ್ಲಿ ಯಲ್ಲಮ್ಮ ಒಬ್ಬಳು ಮೃತಪಟ್ಟಿರುತ್ತಾಳೆ. ಸದರಿ ಯಲ್ಲಮ್ಮಳಿಗೆ 8 ಜನ ಮಕ್ಕಳು ಇರುತ್ತಾರೆ ಗಂಡ ಮೃತಪಟ್ಟಿರುತ್ತಾನೆ. ಸದರಿ ಯಲ್ಲಮ್ಮಳ 8 ಜನ ಮಕ್ಕಳ ಹೆಸರು ನನಗೆ ಹೇಳಲು ಬರುವುದಿಲ್ಲ. ಈ ದಾವೆಯಲ್ಲಿ ನನ್ನ ತಾತನ 3 ಜನ ಹೆಣ್ಣು ಮಕ್ಕಳಲ್ಲಿ ಲಿಂಗಮ್ಮ, ಶಿವಮಲ್ಲಮ್ಮ ಮತ್ತು ಯಲ್ಲಮ್ಮಳ ವಾರಸುದಾರರ ವಿರುದ್ದ ನಾನು ಈ ದಾವೆ ಸಲ್ಲಿಸಿರುತ್ತೇನೆ. ಸದರಿಯವರ ವಿರುದ್ದ ದಾವೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತುಗಳೆಲ್ಲವು ನನ್ನ ತಾತನ ಹೆಸರಿನಲ್ಲಿ ಇರುತ್ತವೆ. ಅ ಕುರಿತು ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಯಾವ ದಾಖಲಾತಿಗಳನ್ನು ಸಲ್ಲಿಸಿರುತ್ತೀಯಾ ಎಂಬ ಪ್ರಶ್ನೆಗೆ ಪಹಣಿಗಳನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ದಾವ ಆಸ್ತಿಗಳು ನನ್ನ ತಾತನ ಹೆಸರಿನಲ್ಲಿ ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಜೀವಂತ ಅವಧಿಯಲ್ಲಿ ಆತನ ಸಹೋದರರ ನಡುವೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ವಿಭಾಗದಲ್ಲಿ ಸ.ನಂ.12/4 ರಲ್ಲಿ 20 ಗುಂಟೆ, 12/5 ರಲ್ಲಿ 1 ಎಕರೆ ಮತ್ತು 12/6 ರಲ್ಲಿ 39 ಗುಂಟೆ ಒಟ್ಟು 2 ಎಕರೆ 19 ಗುಂಟೆ ನನ್ನ ತಂದೆ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ವಿಭಾಗವಾದ ನಂತರ ತನ್ನ ಭಾಗದ 12/5 ರಲ್ಲಿ 1 ಎಕರೆ ಮತ್ತು 12/6 ರಲ್ಲಿ 39 ಗುಂಟೆ ಜಮೀನುಗಳನ್ನು ಮಲ್ಲಪ್ಪ ತಂದೆ ಶಿವಪ್ಪ ಅನ್ವರ್ ಇವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮಾರಾಟ ಮಾಡಿದ 1 ಎಕರೆ 39 ಗುಂಟೆ ಮಲ್ಲಪ್ಪನಿಂದ ಆತನ ಹೆಂಡತಿಯಾದ ಲಿಂಗಮ್ಮಳ ಹೆಸರಿಗೆ 2006 ರಲ್ಲಿ ಮುಟೇಶನ ಆಗಿರುತ್ತದೆ ಎಂದರೆ ಸರಿಯಲ್ಲ. ಬಾಕಿ ಉಳಿದ 20 ಗುಂಟೆ ಜಮೀನು ನಮ್ಮ ಭಾಗಕ್ಕೆ ಇದ್ದು ಅದು ನಮ್ಮ ತಾತನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ಮೃತ ಶಿವರಾಯನ ವಿಭಾಗಕ್ಕೆ ಸ.ನಂ.12/5 ರಲ್ಲಿ 1 ಎಕರೆ 33 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ಮಲ್ಲಪನ ಭಾಗಕ್ಕೆ ಸ.ನಂ.31/3 ರಲ್ಲಿ 2 ಎಕರೆ 16 ಗುಂಟೆ

ಬಂದಿರುತ್ತದೆ ಎಂದರೆ ಸರಿಯಲ್ಲ. ಗಂಗಪ್ಪನ ಭಾಗಕ್ಕೆ ಸ.ನಂ.32 ರಲ್ಲಿ 2 ಎಕರೆ 2 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ಕಾರಮಾಚಪ್ಪ ನನ್ನ ತಾತ ಅಮರಪ್ಪ ಸಹೋದರನಾಗಿರುತ್ತಾನೆ ಎಂದರೆ ಸರಿ. ಸದರಿ ಸ.ನಂ.23 ರಲ್ಲಿ 36 ಗುಂಟೆಯನ್ನು ಕಾರಮಾಚಪ್ಪನ ಭಾಗಕ್ಕೆ ಹೋಗಿದ್ದು ಆತನೇ ಸಾಗುವಳಿದಾರನು ಆಗಿರುತ್ತಾನೆ ಎಂದರೆ ಸರಿಯಲ್ಲ. ಕಾರಮಾಚಪ್ಪನನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಕಾರಮಾಚಪ್ಪ ಮೃತಪಟ್ಟಿರುತ್ತಾನೆ. ಕಾರಮಾಚಪ್ಪನಿಗೆ ಮಲ್ಲಪ್ಪ ಮತ್ತು ಶಿವಪ್ಪ ಎಂದು ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿ ಇಬ್ಬರು ಮಕ್ಕಳು ಇರುತ್ತಾರೆ ಆದರೆ ಅವರ ಹೆಸರು ಗೊತ್ತಿಲ್ಲ. ಸದರಿ 36 ಗುಂಟೆಯನ್ನು ಮಲ್ಲಪ್ಪ ಮತ್ತು ಶಿವಪ್ಪ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವ ಜಮೀನುಗಳಲ್ಲಿ ನಮ್ಮ ತಂದೆಯ ಜೀವಂತ ಅವಧಿಯಲ್ಲಿ ವಿಭಾಗವಾಗಿದ್ದು ನನ್ನ ತಂದೆ, ತನ್ನ ಭಾಗಕ್ಕೆ ಬಂದ 3 ಜಮೀನುಗಳಲ್ಲಿ 2 ಜಮೀನುಗಳನ್ನು ಮಾರಾಟ ಮಾಡಿದ್ದು ಎಲ್ಲ ವಿಚಾರ ಗೊತ್ತಿದ್ದು ನನ್ನ ತಂದೆ ಮಾರಾಟ ಮಾಡಿದ ಸ್ವತ್ತನ್ನು ಹೊರತು ಪಡಿಸಿ ಪ್ರತಿವಾದಿಗಳಿಗೆ ತೊಂದರೆ ನೀಡಿ ಲುಕ್ಸಾನ ಮಾಡಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗೆ ಅವಶ್ಯಕ ಪಕ್ಷಕಾರರನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.